ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ13-01-2026 ರಂದು ಬೋಧಿಸಲಾಯಿತು.

ಪಾಟೀ ಸವಾಲುಃ1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಜಿ ಎಸ್ ಎಚ್ ವಕೀಲರಿಂದಃ

1. ವಾದಿ ಈ ದಾವೆಯನ್ನು ದಾವಾಸ್ತಿಯಲ್ಲಿ ಕಂಬ ಹಾಕಿರುವ ಬಗ್ಗೆ ಈ ದಾವೆ ಸಲ್ಲಿಸಿರುತ್ತಾರೆ. ದಾವಾಸ್ತಿಯಲ್ಲಿ ಸದರಿ ಕಂಬಗಳನ್ನು ಹಾಕಿ ಈಗೇ 7 ವರ್ಷಗಳಾಗಿರುತ್ತವೆ. ಸದರಿ ಕಂಬಗಳನ್ನು ಯಾವ ಸರ್ವೆ ನಂಬರನಲ್ಲಿ ಹಾಕಿರುತ್ತಾರೆ ಎಂದು ಈಗ ಹೇಳಲು ಆಗುವುದಿಲ್ಲ.

2. ನನ್ನ ಜಮೀನು ಯಾವ ಸರ್ವೆ ನಂಬರನಲ್ಲಿ ಇರುತ್ತದೆ ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ದಾವಾಸ್ತಿ ಗದ್ದೆ ಜಮೀನಾಗಿರುತ್ತದೆ. ನನ್ನ ಜಮೀನಿನಲ್ಲಿ ಪಂಪಸೆಟ್ ಇರುವುದಿಲ್ಲ.

3. ಸಾಮಾನ್ಯವಾಗಿ ಗದ್ದೆ ಜಮೀನಿನಲ್ಲಿ ಭತ್ತವನ್ನು ಮಳೆಗಾಲದಲ್ಲಿ ಬೆಳೆಯುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಮಳೆಗಾಲದಲ್ಲಿ ಮಳೆ ಬರುವುದರಿಂದ ಪಂಪಸೆಟ್ ನ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿ.

4. ಸಾಮಾನ್ಯವಾಗಿ ಜನವರಿ ತಿಂಗಳಲ್ಲಿ ತೋಟಗಳನ್ನು ಸ್ವಚ್ಚಗೊಳಿಸುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಡಿಸೆಂಬರ್ ತಿಂಗಳ ವರೆಗೆ ಗದ್ದೆಯಲ್ಲಿ ಬೆಳೆದ ಭತ್ತದ ಕೊಯ್ಲು ಮುಗಿಯುತ್ತದೆ ಎಂದರೆ ಸರಿ.

5. ದಾವಾಸ್ತಿಗೂ ಈ ಪ್ರಕರಣಕ್ಕೂ ನನಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿ. 1(ಎ) ನೇ ವಾದಿ ರವರು ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ಹೇಳಿದ್ದರಿಂದ ನಾನು ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು 1(ಎ) ನೇ ವಾದಿ ರವರು ತಯಾರಿಸಿದ್ದು ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**